# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **ಕೊಪ್ಪಳ ಜಿಲ್ಲೆಯ ತಾಲ್ಲೂಕು ಗ್ಯಾಸೆಟಿಯರ್‌ಗಳ ಸಲಹಾ ಸಮಿತಿ ರಚಿಸುವ ಬಗ್ಗೆ.**

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಕಸಂವಾ 04 ಕರಾಗೆ 2018, ದಿನಾಂಕ:01.08.2018

2. ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಇವರ ಪತ್ರ ಸಂಖ್ಯೆ: ಕಗ್ಯಾಇ/ತಾಗ್ಯಾ/ ಸಸಮಿತಿ /131 2017-18/I, ದಿನಾಂಕ: 28.03.2018.

**ಪ್ರಸ್ತಾವನೆ:**

ಮೇಲೆ ಓದಲಾದ (1) ಸರ್ಕಾರಿ ಆದೇಶದಲ್ಲಿ 2018-19 ನೇ ಸಾಲಿನ ಮುಂದುವರೆದ ಯೋಜನೆಯಲ್ಲಿ ತಾಲ್ಲೂಕು ಗ್ಯಾಸೆಟಿಯರ್ ಪ್ರಕಟಣೆ ಶೀರ್ಷಿಕೆಯಡಿ ಕೊಪ್ಪಳ ಜಿಲ್ಲೆಯ ತಾಲ್ಲೂಕು ಗ್ಯಾಸೆಟಿಯರ್‌ಗಳ ರಚನೆ, ಸಂಪಾದನೆ, ಸಲಹಾ ಸಮಿತಿ ಸಭೆ ಹಾಗೂ ಪುಟ ವಿನ್ಯಾಸ ಕಾರ್ಯವನ್ನು ಹಮ್ಮಿಕೊಳ್ಳಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಇವರು ಗ್ಯಾಸೆಟಿಯರ್ ಇಲಾಖೆಯು 1958 ರಲ್ಲಿ ಅಸ್ತಿತ್ವಕ್ಕೆ ಬಂದು ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕರಣಾ ಕಾರ್ಯ[illegible]ವಾಗಿ ತೊಡಗಿದ್ದು, ಗ್ಯಾಸೆಟಿಯರ್ ಸಲಹಾ ಸಮಿತಿಯ ಸಲಹೆ ಮೇರೆಗೆ ತಾಲ್ಲೂಕು ಮಟ್ಟದಲ್ಲಿ ವಿಶೇಷ ಗ್ಯಾಸೆಟಿಯರ್‌ಗಳನ್ನು ತಯಾರಿಸಲು ನಿಶ್ಚಯಿಸಿದೆ. ತಾಲ್ಲೂಕು ಮಟ್ಟದಲ್ಲಿ ಸಮೀಕರಿಸಿರುವ ವಿವಿಧ ಕ್ಷೇತ್ರಗಳ ಸಾಧನೆಗಳನ್ನು ದಾಖಲಿಸುವುದು ಈ ಸಂಪುಟಗಳ ಪ್ರಮುಖ ಉದ್ದೇಶವಾಗಿದೆ. ಈ ವಿನೂತನ ಯೋಜನೆಯಡಿ ಪ್ರಥಮ ಪೈಲಟ್ ಯೋಜನೆಯಾಗಿ ಮೈಸೂರು ಜಿಲ್ಲೆ 7 ತಾಲ್ಲೂಕು ಗ್ಯಾಸೆಟಿಯರ್‌ಗಳನ್ನು ಇಲಾಖೆಯು ಈಗಾಗಲೇ ಪ್ರಕಟಿಸಿದೆ.

ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು 2016-17 ನೇ ಸಾಲಿನಲ್ಲಿ ಚಿತ್ರದುರ್ಗ, ದಾವಣಗೆರೆ ಹಾಗೂ ಕೊಪ್ಪಳ ಜಿಲ್ಲೆಗಳ ತಾಲ್ಲೂಕು ಗ್ಯಾಸೆಟಿಯರ್‌ಗಳ ಮುದ್ರಣ ಕಾರ್ಯವನ್ನು ಹಮ್ಮಿಕೊಳ್ಳಲಾಗಿದ್ದು, 2016-17 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆ. ಕೊಪ್ಪಳ ಜಿಲ್ಲೆಯ ತಾಲ್ಲೂಕು ಗ್ಯಾಸೆಟಿಯರ್‌ಗಳ ಹಸ್ತಪ್ರತಿಗಳನ್ನು ವಿದ್ವಾಂಸರು ಸಕಾಲದಲ್ಲಿ ರಚಿಸಿ ನೀಡದಿದ್ದ ಕಾರಣ ಸಲಹಾ ಸಮಿತಿ ರಚನೆ ವಿಳಂಬವಾಗಿದ್ದು, ತಾಲ್ಲೂಕು ಗ್ಯಾಸೆಟಿಯರ್‌ಗಳ ಅಧ್ಯಾಯಗಳ ರಚನೆಯನ್ನು ಹೊರಗಿನ ವಿದ್ವಾಂಸರುಗಳಿಗೆ ವಹಿಸಿಕೊಡಲಾಗಿದ್ದು, ಸದರಿ ವಿದ್ವಾಂಸರುಗಳು ರಚಿಸಿಕೊಟ್ಟಂತಹ ತಾಲ್ಲೂಕು ಗ್ಯಾಸೆಟಿಯರ್‌ನ ಅಧ್ಯಾಯಗಳನ್ನು ಸಮರ್ಪಕವಾಗಿ ಹಾಗೂ ಕರಾರುವಕ್ಕಾಗಿ ಪರಾಮರ್ಶಿಸುವ ದೃಷ್ಟಿಯಿಂದ ಸಲಹಾ ಸಮಿತಿಯನ್ನು ರಚಿಸುವುದು ಅವಶ್ಯಕವಾಗಿದ್ದು, ಸರ್ಕಾರದ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಾಲ್ಕು ಜನ ವಿಷಯ ತಜ್ಞರನ್ನು ಸಲಹಾ ಸಮಿತಿಯ ಸದಸ್ಯರನ್ನಾಗಿ ಹಾಗೂ ಮುಖ್ಯ ಸಂಪಾದಕರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿ ಸಲಹಾ ಸಮಿತಿಯನ್ನು ರಚಿಸಬೇಕಿದ್ದು, ಕೊಪ್ಪಳ ಜಿಲ್ಲೆಯ ತಾಲ್ಲೂಕು ಗ್ಯಾಸೆಟಿಯರ್ ಸಲಹಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 07 ಕರಾಗೆ 2018**

**ಬೆಂಗಳೂರು, ದಿನಾಂಕ: 15.09.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ತಾಲ್ಲೂಕು ಗ್ಯಾಸೆಟಿಯರ್‌ನ ಅಧ್ಯಾಯಗಳನ್ನು ಸಮರ್ಪಕವಾಗಿ ಹಾಗೂ ಕರಾರುವಕ್ಕಾಗಿ ಪರಾಮರ್ಶಿಸುವ ದೃಷ್ಟಿಯಿಂದ ಸಲಹಾ ಸಮಿತಿಯ ಸದಸ್ಯರನ್ನಾಗಿ ಹಾಗೂ ಮುಖ್ಯ ಸಂಪಾದಕರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿ ಸಲಹಾ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ರಚಿಸಲಾಗಿದೆ.

| ಕ್ರಸಂ | ಇಲಾಖೆ | ಅಧ್ಯಕ್ಷರು/ಸದಸ್ಯರು |
|---|---|---|
| 01. | ಪ್ರಧಾನ ಕಾರ್ಯದರ್ಶಿಗಳು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ. | ಅಧ್ಯಕ್ಷರು |
| 02. | ಶ್ರೀ ಅಲ್ಲಮ ಪ್ರಭು,<br>ಬೆಟ್ಟದೂರು, ನಿವೃತ್ತ ಪ್ರಾಚಾರ್ಯ, ಕಲ್ಯಾಣ ನಗರ, ಕಿನ್ನಾಳ ರಸ್ತೆ, ಕೊಪ್ಪಳ-583231.<br>ಮೊ.ನಂ: 9844049205. | ಸದಸ್ಯರು |
| 03. | ಡಾ॥ ಕೆ.ಬಿ. ಬ್ಯಾಳಿ,<br>ಹಿರಿಯ ಸಾಹಿತಿ,<br>ಮನೆ: ಶ್ರೀ ಶಿವಶಾಂತವೀರ ಕೃಪ, ಗವಿಸಿದ್ಧೇಶ್ವರ ನಗರ, ಕುಕನೂರ-583232, ಜಿ॥ ಕೊಪ್ಪಳ,<br>ತಾ॥ ಯಲಬುರ್ಗಾ. ಮೊ.ನಂ: 9449689567 | ಸದಸ್ಯರು |
| 04. | ಶ್ರೀ ಬಸವರಾಜ ಆಕಳವಾಡಿ, ಜಿಲ್ಲಾ ವಾರ್ತಾಧಿಕಾರಿ(ನಿ), 'ಸಿರಿಗಂಧ', ವರ್ಣೇಕರ್ ಬಡಾವಣೆ, ಎಸ್.ವಿ.ಎಮ್. ಶಾಲೆ ಹಿಂಭಾಗ, ಕೊಪ್ಪಳ-583231. ಮೊ.ನಂ: 9481347306 | ಸದಸ್ಯರು |
| 05. | ಶ್ರೀ ಬಸವರಾಜ ಚೆನ್ನಪ್ಪ ಐಗೋಳ್, ನಿವೃತ್ತ ಪ್ರಾಂಶುಪಾಲರು, ನಂ:2, ಗಡಿಗಪ್ಪ ಲೇಔಟ್, ವಿರುಪಾಪುರ, ಆನೆಗುಂದಿ ರಸ್ತೆ,<br>ಗಂಗಾವತಿ-583227, ಜಿ: ಕೊಪ್ಪಳ. | ಸದಸ್ಯರು |
| 06. | ಮುಖ್ಯ ಸಂಪಾದಕರು,<br>ಕರ್ನಾಟಕ ಗ್ಯಾಸೆಟಿಯರ್ ಇಲಾಖೆ. | ಸದಸ್ಯ ಕಾರ್ಯದರ್ಶಿಗಳು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ. ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ).

ಇವರಿಗೆ :

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಕೆಂಗೇರಿ ಹೊರವಲಯ ಮುದ್ರಣಾಲಯ, ಬೆಂಗಳೂರು-ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು:

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), (ಇ&ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಪಿ.ಬಿ.ನಂ.5329, ಬೆಂಗಳೂರು.
3. ಮುಖ್ಯ ಸಂಪಾದಕರು ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
5. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ 10 ಪ್ರತಿಗಳೊಂದಿಗೆ.
6. ಸಮಿತಿಯ ಸದಸ್ಯರುಗಳಿಗೆ (ಮುಖ್ಯ ಸಂಪಾದಕರ ಮೂಲಕ).
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.